# ನೀವು ಕೇಳಿದಿರಿ?

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಕೇಂದ್ರ ಸರ್ಕಾರ ಚುನಾವಣೆ ಬದಲು ಗಿಳಿಶಾಸ್ತ್ರ ಕೇಳಿ ಗೆದ್ದವರನ್ನು ಆಯ್ಕೆ ಮಾಡಿದರೆ?*



ಗಿಳಿ ಆಯ್ಕೆ ಮಾಡುವುದರಿಂದ ಹದ್ದು, ಗಿಡುಗ, ರಣಹದ್ದುಗಳ ಗುಣ ಇರುವವರೇ ಆಯ್ಕೆಯಾಗುವರಂತೆ!

ಗೀತಾ ಬರ್ಲ, ಬೆಂಗಳೂರು
*ಹೆಚ್ಚಾಗಿ ಎಲ್ಲರೂ ಗಂಡುಮಗುವೇ ಜನಿಸಬೇಕೆಂದು ಹಾರೈಸುತ್ತಾರಲ್ಲಾ, ಗಂಡು ಹೆಣ್ಣಿಗಿಂತ ಯಾವುದರಲ್ಲಿ ಮೇಲಿದ್ದಾನೆ?*
ಲೈನ್‌ಮನ್ ಕೆಲಸದಲ್ಲಿ!

ಲ್ಯಾಂಡ್‌ಬ್ಯಾಂಕ್ ಡಿ. ಚಂದ್ರಕುಮಾರ್, ಬೆಂಗಳೂರು
*ಮದುವೆ ಗಂಡಿಗೆ ಜೀವಾವಧಿ ಶಿಕ್ಷೆ ಎಂಬುದು ಇಲ್ಲೊಬ್ಬರ ಅಂಬೋಣ. ತಮ್ಮ ಅಭಿಪ್ರಾಯ...?*
ಬೇಲಿ ದಾಟುವ ಅಭ್ಯಾಸ ಇರುವವರಿಗೆ ಇಂತಹ ಅಭಿಪ್ರಾಯಗಳು ಮೂಡುವುದು ಸಹಜ!

ಆರಿಫ್, ದಾವಣಗೆರೆ
*ಕೆಲವು ಹುಡುಗಿಯರು ಮನೆಯಿಂದ ಹೊರಬರದೆ ಬಾಗಿಲಲ್ಲಿಯೇ ನಿಂತು ಮುಗುಳ್ನಗೆ ಬೀರುತ್ತಾರಲ್ಲಾ, ಏಕೆ?*



ಚೌಕಟ್ಟಿನಲ್ಲಿದ್ದರೆ ಬಿಕ್ಕಟ್ಟಿಗೆ ಸಿಲುಕುವುದಿಲ್ಲವೆಂದು ತಿಳಿದಿರುವುದರಿಂದ!

ಗಾಯತ್ರಿ, ರಾಜಾಜಿನಗರ
*ಆತ್ಮವಿಶ್ವಾಸ, ಶ್ರದ್ಧೆ, ನಂಬಿಕೆ ನಮ್ಮೊಳಗಿದ್ದರೆ ಏನು ಬೇಕಾದರೂ ಸಾಧಿಸಬಹುದಲ್ಲವೆ ಗುರುಗಳೆ?*
ಜೊತೆಗಷ್ಟು ವಿದ್ಯೆ, ವಿವೇಕ ಇದ್ದರೆ ಮಾತ್ರ.

ಕುಮಾರ ಚಲವಾದಿ, ಹೊಳೆನರಸಿಪುರ
*ಸಾಹಿತಿಯಾಗಬೇಕೆಂದಿದ್ದೆ, ಆಗಲಿಲ್ಲ. ಚಿತ್ರನಟನೂ ಆಗಲಿಲ್ಲ. ಜನಪ್ರಿಯನಾಗಬೇಕಾದರೆ ನಾನು ಏನು ಮಾಡಬೇಕು?*
ಪುರಾಣದ ದೇವತೆಗಳೆಲ್ಲಾ ಕಳ್ಳರು, ಸುಳ್ಳರು, ರೌಡಿಗಳು ಎಂದು ಪುಸ್ತಕ ಬರೆಯಿರಿ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ಹಗರಣಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿಟ್ಟಿರುವ ಕೊಠಡಿಗಳೇ ಏಕೆ ಬೆಂಕಿ ಆಕಸ್ಮಿಕಕ್ಕೆ ಸಿಲುಕುತ್ತವೆ?*
ಬೆಂಕಿಗೆ ಕಾರಣ ಕಿಡಿಯಲ್ಲ, ಕಿಡಿಗೇಡಿ!

ಸುಮಿತ್ರಾ ಕೊತ್ವಾಲ್, ಉಡುಪಿ
*ಮದುವೆ, ವರದಕ್ಷಿಣೆ ಕಿರುಕುಳದ ಸುಳ್ಳುದೂರು, ಡೈವೋರ್ಸ್, ಪರಿಹಾರಧನ, ಮರುಮದುವೆ; ಇಲ್ಲೊಬ್ಬಳಿಗೆ ಇದೇ ದಂಧೆಯಾಗಿದೆಯಲ್ಲಾ...?*
ವರದಕ್ಷಿಣೆಗಾಗಿ ಮರುಮದುವೆಯಾದ ಗಂಡಸರೇ ಅವಳಿಗೆ ಸ್ಫೂರ್ತಿಯಂತೆ. ಇದೂ ಒಂದು ರೀತಿಯ ಸ್ತ್ರೀ ಸಮಾನತೆ!

ಓಂಚನ್ನೇಶ್, ಅರಬಿಳಚಿ ಕ್ಯಾಂಪ್
*ನ್ಯಾಯಾಲಯಗಳಲ್ಲಿ ನ್ಯಾಯದೇವತೆಯ ಕಣ್ಣಿಗೇಕೆ ಕಪ್ಪು ಬಟ್ಟೆಯನ್ನು ಕಟ್ಟುತ್ತಾರೆ?*
ನ್ಯಾಯದ ಕೊಲೆಗೆ ಪ್ರತ್ಯಕ್ಷಸಾಕ್ಷಿ ಆಗದಿರಲೆಂದು. ನ್ಯಾಯವಾಗಿ ನೋಡಿದರೆ ಕಣ್ಣಿಗೆ ಬಟ್ಟೆ ಕಟ್ಟುವುದಲ್ಲದೆ ಕಿವಿಗೆ ಹತ್ತಿಯನ್ನೂ ತುರುಕಬೇಕು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ದೇವರು ಗುಡಿಯೊಳಗೇ ಅಡಗಿ ಕುಳಿತಿರುತ್ತಾನಲ್ಲಾ, ಏಕೆ?*
ಹೊರಬಂದರೆ ದೇವಸ್ಥಾನವನ್ನೂ ಡಿನೋಟಿಫೈ ಮಾಡಿ ಸ್ವಂತಕ್ಕೆ ಲಪಟಾಯಿಸಿಬಿಡುವರೆಂಬ ಭಯ!

ಆರ್. ಮಧುಸೂದನ್, ಹಾಸನ
*ಗಂಡ ಪ್ರಾಣಿವೈದ್ಯ, ಹೆಂಡತಿ ದಂತವೈದ್ಯೆ ಆದರೆ ಸಂಸಾರ ಹೇಗಿರುತ್ತದೆ?*
ಕೇಳದೆಯೇ ಪರಿಸ್ಥಿತಿ ಅರಿಯುವ ಅವನ ಗುಣ, ಎಂತಹ ದುರ್ನಾತವನ್ನೂ ಸಹಿಸುವ ಅವಳ ಗುಣದಿಂದ ಸಂಸಾರ ಸೊಗಸಾಗಿಯೇ ಇರುತ್ತದೆ!

ವಿ. ಹಮೀದ್, ವಿಟ್ಲ
*ನನ್ನ ಬೈಕು ಕಂಡು ಕೈ ಚಾಚುತ್ತಾಳೆ. ನಿಲ್ಲಿಸಲೆ?*
ನಿಲ್ಲಿಸಿ. ನಿಮ್ಮನ್ನು ಇಳಿಸಿ, ಬೈಕ್ ಸ್ಟಾರ್ಟ್ ಮಾಡಿ ಗೆಳೆಯನೊಡನೆ ಪರಾರಿಯಾಗುತ್ತಾಳೆ. ಅವಳಿಗೆ ಸಾಥ್, ನಿಮಗೆ ಫುಟ್‌ಪಾತ್!

## ಬಹುಮಾನಿತ ಪ್ರಶ್ನೆ

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಭಾರತದಲ್ಲಿ ಶೌಚಾಲಯಗಳಿಗಿಂತ ಮೊಬೈಲ್ ಫೋನ್‌ಗಳೇ ಜಾಸ್ತಿ ಇವೆಯಂತೆ...?*
ಶುದ್ಧಿಗಿಂತ ಸುದ್ದಿಗೇ ಹೆಚ್ಚು ಮಹತ್ವ ನೀಡಿದರೆ ಆಗುವುದೇ ಹೀಗೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ದೇವರು, ಗುರು; ಇವರಲ್ಲಿ ಯಾರು ಶ್ರೇಷ್ಠರು?*
ಗುರುವೇ. ದೇವನೆಂಬ ಬೆಟ್ಟ ಏರಲು ಅವನೇ ಮೆಟ್ಟಿಲು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಪ್ರವಾಹದ ಸೆಳೆತಕ್ಕೆ ಸಿಕ್ಕಿದರೆ ಕೊಚ್ಚಿಕೊಂಡು ಹೋಗುತ್ತೇವೆ, ಪ್ರೀತಿಯ ಸೆಳೆತಕ್ಕೆ ಸಿಕ್ಕಿದರೆ?*
ಮೆಚ್ಚಿಕೊಂಡು ಬಾಳುತ್ತೇವೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಬಲಗೈಯಿಂದ ನೀಡಿದ್ದು ಎಡಗೈಗೆ ತಿಳಿಯಬಾರದು ಎನ್ನುತ್ತಾರಲ್ಲಾ, ಏಕೆ?*
ಸತಿಪತಿಯರಾಗುವಾಗಲೇ ಗಂಡ ಬಲ, ಹೆಂಡತಿ ಎಡ. ಬಲ ಎಡಕ್ಕೆ ತಿಳಿಯದಂತೆ ಎಲ್ಲೋ ಏನೋ ಕೊಟ್ಟರೆ ಎಡದಿಂದ ಎಡವಟ್ಟು ಖಾತ್ರಿ!

ಕೆ.ವಿ.ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಹೋದ ಜನ್ಮದಲ್ಲಿ ಸಿಕ್ಕ ಚೆಲುವೆ ಈ ಜನ್ಮದಲ್ಲೂ, ಮುಂದಿನ ಜನ್ಮದಲ್ಲೂ ಸಿಗುವಂತಾದರೆ ಹೇಗಿರುತ್ತದೆ?*



ಆ ಚೆಲುವೆಗೆ ಜನ್ಮಗಳು ಕಳೆದರೂ ಕರ್ಮ ಕಳೆದಿಲ್ಲವೆಂಬುದು ಸ್ಪಷ್ಟವಾಗುತ್ತದೆ!

ಆರ್. ನಾಗರಾಜ್, ಗೊರೂರು
*ಆಚಾರವಿರೋ ನಾಲಿಗೆಯೂ ಒಮ್ಮೊಮ್ಮೆ ನೀಚಬುದ್ಧಿಯನ್ನು ತೋರಿಸಿಬಿಡುತ್ತಲ್ಲಾ?*
ಒದ್ದೆಯಾದ ಜಾಗದಲ್ಲಿ ಇರುವುದರಿಂದ ಜಾರುವುದು ಸಹಜ.

ಸವಿತಾ ಕೆ. ಕೊಡಸೋಗೆ
*ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ಎಂದು ಹೇಳುವವನಿಗೂ, ಬರೀ ಕರ್ಮಗಳನ್ನು ಮಾಡುವವನಿಗೂ ವ್ಯತ್ಯಾಸವೇನು?*
ಹೇಳುವವನು ಮೋಕ್ಷಕ್ಕೆ ಟ್ರಾವಲ್ ಏಜೆಂಟ್, ಮಾಡುವವನು ಮೋಕ್ಷ ಪಡೆಯುವ ಯಾತ್ರಿಕ.

■ ರಾಮ್